ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಉಪಾಧ್ಯಕ್ಷೆಯವರೆ, ಈ ಪ್ರಶ್ನೆ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತಹ ಪ್ರಶ್ನೆ. ಮಾನ್ಯ ಸದಸ್ಯರು ಜನರಲ್ ಆಗಿ ಕೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಅದನ್ನು ಗಮನಕ್ಕೆ ತೆಗೆದುಕೊಂಡು ಮಾಡುತ್ತಾರೆ ಎಂದು ಹೇಳುತ್ತೇನೆ. ಇದು ಇಂಜಿನಿಯರಿಂಗ್ ಇಲಾಖೆಗೆ ಸಂಬಂಧಪಟ್ಟಿದ್ದು ಇರುವುದರಿಂದ ನಾವು ಈಗ ಎರಡು ವರ್ಷ ಮುಂದುವರೆಸಿದ್ದೇವೆ. ಕಾನೂನು ಪ್ರಕಾರ ಅವರಿಗೆ ಎನು ದಕ್ಕಬೇಕೋ ಅದನ್ನು ಒದಗಿಸಿಕೊಡತಕ್ಕಂತಹ ಕೆಲಸವನ್ನು ಮಾಡುತ್ತೇವೆ.

ಉಳ್ಳಾಲದಿಂದ ಮರಳಿನ ಅನಧಿಕೃತ ಸಾಗಾಣಿಕೆ

977 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಧಯವಿಟ್ಟು ಉತ್ತರಿಸುವಿರೆ?

ಅ) ಮಂಗಳೂರು ತಾಲ್ಲೂಕಿನ ಉಳ್ಳಾಲದಿಂದ ತಲಪಾಡಿವರೆಗಿನ ಸಮುದ್ರ ಕಿನಾರೆಯ ಮರಳನ್ನು ಅನಧಿಕೃತವಾಗಿ ಸಾಗಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ರೀತಿಯ ಸಾಗಾಟದಿಂದ ಕಡಲು ಕೊರೆತ ಜಾಸ್ತಿ ಆಗುವುದಕ್ಕೆ ನೆರವು ನೀಡಿದಂತಾಗುವುದಿಲ್ಲವೇ?

ಇ) ಈ ಭಾಗದ ಮರಳು ಸಾಗಾಣಿಕೆಯ ಗುತ್ತಿಗೆಗೆ ನೇಮಕ ಮಾಡಲಾಗಿದೆಯೇ? ಹಾಗಿದ್ದಲ್ಲಿ ಅದರ ಪಟ್ಟಿ ಒದಗಿಸುವುದು.

ಈ) ಸಮುದ್ರ ಕಿನಾರೆಯ ರಕ್ಷಣೆಗಾಗಿ ಈ ಮರಳು ಆಗೆದು ತೆಗೆಯದಂತೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳೇವುದೇ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಗುತ್ತಿಗೆ ಮಂಜೂರು ಮಾಡಿಲ್ಲ.

ಈ) ಈ ಪ್ರದೇಶವನ್ನು ಈಗಾಗಲೇ ಕಂದಾಯ ಇಲಾಖೆಯ ಅರಣ್ಯ ಇಲಾಖೆಗೆ ಒಪ್ಪಿಸಿ ಗಿಡ ಮರಗಳನ್ನು ಬೆಳೆಯುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಶ್ರೀ ಬಿ.ಎಂ. ಇದಿನಬ್ಬ : ನನ್ನ ಪ್ರಶ್ನೆಯಲ್ಲಿ ಉಳ್ಳಾಲದಿಂದ ತಲಪಾಡಿಯವರೆಗೆ ಅನಧಿಕೃತವಾಗಿ ಮರಳನ್ನು ಸಾಗಿಸತ್ತಿರತಕ್ಕ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದರೆ, ಅದಕ್ಕೆ ಇಲ್ಲ, ಉದ್ಭವಿಸುವುದಿಲ್ಲ, ಗುತ್ತಿಗೆ ಮಂಜೂರು ಮಾಡಿಲ್ಲ ಎಂದು ಹೇಳಿದೆ. ಆದರೆ ಎಲ್ಲಿಯೋ ತಪ್ಪಿಹೋಗಿದೆ ಎಂದು ನನಗೆ ಕಾಣಿಸುತ್ತಾ ಇದೆ. ಏಕೆಂದರೆ ದಿನನಿತ್ಯ ಲಾರಿಗಳಲ್ಲಿ ಕಳ್ಳಾಟಗಳಲ್ಲಿ ಕೊಂಡು ಹೋಗತಕ್ಕಂತ ವಿಚಾರ ಪ್ರತಿಯೊಬ್ಬರು ಬಂದು ನಮ್ಮ ಹತ್ತಿರ ಆಗಾಗ ಹೇಳುತ್ತಿದ್ದಾರೆ, ದೂರು ಕೊಡುತ್ತಾ ಇದ್ದಾರೆ. ಅಲ್ಲದೆ ಕಳ್ಳಸಾಗಾಣಿಕೆಯಲ್ಲಿ ಮರಳನ್ನು ಸಾಗಿಸುತ್ತಿದ್ದಾಗ ಅದರ ಎದುರು ಧರಣಿ ಮಾಡಿದ್ದು, ಅದನಾನು ನಿಲ್ಲಿಸಿದ್ದು, ಹೀಗೆ ಎಷ್ಟೊ ಕಾರ್ಯಕ್ರಮಗಳು ಇರುತ್ತವೆ. ಆದುದರಿಂದ ಗಣಿ ಇಲಾಖೆಯಲ್ಲಿ ಏನಾದರೂ ಉಪಾಯದಿಂದ ಕೆಲವರು ಈ ರೀತಿ ಕೊಂಡು ಹೋಗುತ್ತಾರೆ ಎಂಬುದನ್ನು ಮಂತ್ರಿಗಳು ಕೂಲಂಕಷವಾಗಿ ತಿಳಿದು ಅದಕ್ಕೆ ಒಂದು ಉಪಾಯವನ್ನು ಮಾಡಿ ಅದನ್ನು

ನಿಲ್ಲಿಸಿಬಿಡುವುದು ಒಳ್ಳೆಯದು. ಇದು ದಿನನಿತ್ಯ ನಡೆಯುತ್ತಿರತಕ್ಕಂತಹ ವಿಚಾರ, ನಮಗೆ ದಿನನಿತ್ಯ ದೂರುಗಳು ಬರುತ್ತಿವೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ತಾವು ಕಾಣಿಸಿದಂತಹ ಪ್ರದೇಶಗಳಲ್ಲಿ ಕಡಲ ಕೊರೆತ ತಪ್ಪಿಸುವ ಉದ್ದೇಶದಿಂದ ಅಲ್ಲಿ ಮರಳು ತೆಗೆಯಬಾರದು ಮತ್ತು ಅಲ್ಲಿ ಗಿಡಮರಗಳನ್ನು ನೆಡಬೇಕು ಎಂದು ಸರ್ಕಾರ ನಿರ್ಣಯ ಮಾಡಿ, ಅರಣ್ಯ ಇಲಾಖೆಗೆ ಆ ಜಾಗವನ್ನು ಕೊಟ್ಟಿದ್ದೇವೆ. ಅನಧಿಕೃತವಾಗಿ ಮತ್ತು ಅಕ್ರಮವಾಗಿ ಮರಳನ್ನು ಸಾಗಿಸುವಂತಹ ವಿಚಾರ ತಾವು ಈಗ ಸರ್ಕಾರಕ್ಕೆ ಹೇಳಿದ್ದೀರಿ. ಅದಕ್ಕೆ ಕಠಿಣವಾದಂತಹ ಕಾರ್ಯಕ್ರಮ ತೆಗೆದುಕೊಂಡು ಯಾವುದೇ ರೀತಿಯಲ್ಲಿ ಮರಳನ್ನು ತೆಗೆಯದ ರೀತಿಯಲ್ಲಿ ಮಾಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ನಾನು ಒಂದು ವಿಚಾರ ತಂದಿದ್ದೇನೆ. ನೇರವಾಗಿ ಈ ಪ್ರಶ್ನೆಗೆ ಸಂಬಂಧಪಡದೇ ಇದ್ದರೂ ಸಹ ಕೇಳಬೇಕಾಗಿದೆ. ಹಿಂದೆ ಸ್ಯಾಂಡ್ ತೆಗೆಯುವುದಕ್ಕೆ ಏನು ಪರ್ಮಿಷನ್ ಕೊಡುತ್ತಿದ್ದರು, ಅದು ಟೋಟಲಿ ಸ್ಟಾಪ್ ಆಗಿದೆ. ಕೇಂದ್ರಸರ್ಕಾರದಿಂದ ರಾಜ್ಯಸರ್ಕಾರಕ್ಕೆ ಒಂದು ಪತ್ರ ಬರೆದು, ಇದು ಎನ್‌ವೈರ್ನಮೆಂಟ್ ಕ್ಲಿಯರೆನ್ಸ್ ಆಗದ ವಿನಃ ಯಾವುದೇ ಪರ್ಮಿಟ್ ಕೊಡಬಾರದು ಏನ್ನುವ ಆದೇಶ ಕೊಟ್ಟಿದ್ದಾರೆ. ಆ ಆದೇಶದ ಮೇರೆಗೆ ಇವತ್ತು ಎಲ್ಲಾ ಫಾರೆಸ್ಟ್ ಅಧಿಕಾರಿಗಳು ಅದೇ ಆದೇಶ ತೋರಿಸಿ ಪರ್ಮಿಟ್ ಕೊಡುತ್ತಾ ಇಲ್ಲ. ಹೀಗಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸೀ ಬರ್ಡ್ ಇರಬಹುದು, ಕೈಗಾ ಪ್ರಾಜೆಕ್ಟ್ ಕೆಲಸ ಇರಬಹುದು, ವಿಷಿಯನ್ ಬ್ಯಾಂಕ್ ತೆಗೆದುಕೊಂಡ ರೋಡ್ ಇರಬಹುದು, ಎಲ್ಲಾ ಕೆಲಸ ನಿಂತುಹೋಗಿದೆ. ಅವರು ಹೇಳಿದ ಹಾಗೆ ಅಲ್ಲಿ ಅನ್ ಅಥರೈಸ್ಡ್ ಅನ್ ಸ್ಯಾಂಡ್ ತೆಗೆಯುತ್ತಿದ್ದಾರೆ, ಗವರ್ನಮೆಂಟ್‌ಗೆ ರೆವೆನ್ಯೂ ಬರುತ್ತಾ ಇಲ್ಲ, ಅಥರೈಸ್ಡ್ ಸ್ಯಾಂಡ್ ತೆಗೆದುಕೊಂಡು ಹೋಗುತ್ತಾ ಇದ್ದಾರೆ. ಒನಿಯನ್ ಜನರಿಗೆ ಸಿಕ್ಕುತ್ತಾ ಇಲ್ಲ, ಹಾಗಾಗಿ ಇದೊಂದು ಜ್ವಲಂತ ಸಮಸ್ಯೆಯಾಗಿದೆ. ಡೆವಲಪ್‌ಮೆಂಟ್ ಆಕ್ಟಿವಿಟೀಸ್ ಇಲ್ಲಿ ಸ್ಟಾಪ್ ಆಗಿವೆ. ತಮ್ಮ ಸರ್ಕಾರದ ನಿಲುವು ಏನು? ಈ ಸಮಸ್ಯೆಯನ್ನು ಯಾವ ಪ್ರಕಾರ ಬಗೆಹರಿಸುತ್ತೀರಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ವಿರೋಧಪಕ್ಷದ ನಾಯಕರು ಒಂದು ವಿಶೇಷವಾದಂತಹ ವಿಚಾರವನ್ನು ನಮ್ಮ ಗಮನಕ್ಕೆ ತಂದು ಅದರಿಂದ ಕಾಮಗಾರಿಗಳಿಗೆ ತೊಂದರೆ ಆಗುತ್ತದೆ ಎಂದು ಹೇಳಿದ್ದಾರೆ. ಇದರ ವಿಚಾರವಾಗಿ ನಾನು ಪ್ರತ್ಯೇಕವಾಗಿ ಅಧಿಕಾರವನ್ನು ಕರೆದು ಯಾವ ರೀತಿಯಲ್ಲಿ ಇದನ್ನು ಸರಿಪಡಿಸಬಹುದು ಎಂಬುದನ್ನು ನೋಡಿ ಕ್ರಮಕೈಗೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷರೆ, ಮೂರನೇ ತಾರೀಖಿನ ಸಂಜೆವಾಣಿಯಲ್ಲಿ ಒಂದು ಸಂಗತಿ ಬಂದಿದೆ. "ಪಿನಾಕಿನಿ" ಮರಳು ಆಂಧ್ರಕ್ಕೆ ಅಕ್ರಮ ಸಾಗಾಣಿಕೆ ಘರ್ಷಣೆ ಎಂದು ಬಂದಿದೆ. ಅಲ್ಲಿ ಗನ್ ಫೈಟಿಂಗ್ ಕೂಡ ಆಗಿದೆ. ನಗರಗಳು ಸಿಕ್ಕಾಪಟ್ಟೆ ಬೆಳೆಯುತ್ತಿವೆ. ಮರಳು ಬಾರದೇ ಇದ್ದರೆ ನಡೆಯುವುದಿಲ್ಲ, ಮರಳು ಬೇಕಾಗುತ್ತದೆ. ಆದರೆ ಈ ಮರಳನ್ನು ತೆಗೆದುಕೊಂಡು ಹೋಗುತ್ತಿರುವುದರಿಂದ ಸರ್ಕಾರಕ್ಕೂ ಲಾಭ ಇಲ್ಲ, ಜೊತೆಗೆ ರೈತರೂ ಹಾಳಾಗುತ್ತಿದ್ದಾರೆ. ಮರಳು

ತೆಗೆಯುವುದರಿಂದ ನೀರು ಭೂಮಿಯೊಳಗೆ ಪರ್‌ಕ್ಯುಲೇಟ್ ಆಗುವುದಿಲ್ಲ, ಪಕ್ಕದಲ್ಲಿರುವ ಬಾವಿಗಳಲ್ಲಿ ನೀರು ಬರುವುದಿಲ್ಲ, ಇಂತಹ ಅಪಾಯವನ್ನು ರೈತರು ಅನುಭವಿಸುತ್ತಿದ್ದಾರೆ. ಎರಡನೆಯದಾಗಿ, ಕೆಲವು ಪುಡಾರಿಗಳು ಹುಟ್ಟಿಕೊಂಡು ಒಂದು ಲಾರಿಗೆ 10 ರಿಂದ 20 ರೂಪಾಯಿ ವಸೂಲು ಮಾಡಿಕೊಳ್ಳುತ್ತಿದ್ದಾರೆ. ಲಾರಿಯವರು ದುಡ್ಡು ಕೊಡುವುದಿಲ್ಲ ಎಂದಾಗ ಫೈಟಿಂಗ್ ನಡೆದಿದೆ. ದಯವಿಟ್ಟು ತಾವು ಏನಾದರೂ ಮಾಡಿ ಇದನ್ನು ರೆಗ್ಯುಲರೈಸ್ ಮಾಡಿ, ಈ ಪುಡಾರಿಗಳು ಹಣ ತಿನ್ನುವುದನ್ನು ತಪ್ಪಿಸಿ, ಇಲ್ಲವೇ ನೇರವಾಗಿ ಸರ್ಕಾರಕ್ಕೆ ಹಣ ಬರಲಿ. ಮರಳು ಎತ್ತಲೇ ಬೇಕಾಗುತ್ತದೆ. ಇಲ್ಲವೆಂದರೆ ನಮ್ಮ ನಾಯಕರು ಹೇಳಿದ ಹಾಗೆ ಎಲ್ಲ ಡೆವಲಪ್‌ಮೆಂಟ್ ವರ್ಕ್ ನಿಂತು ಹೋಗುತ್ತದೆ. ಆದ್ದರಿಂದ ದಯಮಾಡಿ ಈ ಪುಡಾರಿಗಳ ಕಾಟ ತಪ್ಪಿಸಿ ನೇರವಾಗಿ ಸರ್ಕಾರಕ್ಕೆ ಹಣ ಬರುವಂತೆ ಏನಾದರೂ ವ್ಯವಸ್ಥೆ ಮಾಡಿಕೊಳ್ಳುತ್ತೀರ. ಅದರ ಬಗ್ಗೆ ಆರ್ಟಿಕಲ್ ಬಂದಿರುವ ಈ ಪೇಪರ್ ತಮಗೆ ಕಳುಹಿಸಿಕೊಡುತ್ತಾ ಇದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ಗಮನಿಸಿ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಬೊಮ್ಮನಹಳ್ಳಿಯಲ್ಲಿರುವ ಅರಣ್ಯ ಭೂಮಿಯ ವಿಸ್ತೀರ್ಣ

616 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ.

ಅ) ನೆಲಮಂಗಲ ತಾಲ್ಲೂಕು ಬೊಮ್ಮನಹಳ್ಳಿ ಅರಣ್ಯಕ್ಕೆ ಸೇರಿದ ಭೂ ವಿಸ್ತೀರ್ಣವೆಷ್ಟು?

ಆ) ನಿರುಪಯುಕ್ತವಾಗಿರುವ ಆ ಜಾಗದಲ್ಲಿ ಒಂದು ಕೈಗಾರಿಕಾ ಕೇಂದ್ರವನ್ನ ಮಾಡಿದರೆ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗ ಅವಕಾಶ ದೊರೆಯಲು ಅನುಕೂಲವಾಗುವುದೆಂಬ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) 161 ಎಕರೆ 9 ಗಂಟೆ. (64.76 ಹೆಕ್ಟೇರ್)

ಆ) ಈ ಪ್ರದೇಶವನ್ನು ರಾಜ್ಯ ಅರಣ್ಯ ಎಂದು 1932ರಲ್ಲಿ ಘೋಷಿಸಿಲಾಗಿದೆ. ಈ ಅರಣ್ಯ ಪ್ರದೇಶದಲ್ಲಿ ನೀಲಗಿರಿ ನೆಡುತೋಪು ಇರುತ್ತದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಅಂಜನಮೂರ್ತಿ : ಮಾನ್ಯ ಉಪಾಧ್ಯಕ್ಷೀಣಿಯವರೇ, ಈ ಬೊಮ್ಮನಹಳ್ಳಿ ಅರಣ್ಯ ಪ್ರದೇಶ ನೆಲಮಂಗಲ ಟೌನ್‌ಗೆ ಅತೀ ಸಮೀಪದಲ್ಲಿ ಇದ್ದು ರಾಷ್ಟ್ರೀಯ ಹೆದ್ದಾರಿ 4ರ ಪಕ್ಕದಲ್ಲಿರತಕ್ಕಂತ ಪ್ರದೇಶ. ಇಲ್ಲಿ 161 ಎಕರೆ ಜಮೀನು ಇದೆ. ತಮ್ಮ ಮುಖಾಂತರ ಸಚಿವರನ್ನು ಕೇಳುತ್ತಿದ್ದೇನೆ. ಅಲ್ಲಿ ಬೆಲೆ ಬಾಳತಕ್ಕ ಮರಗಳು ಅಂದರೆ ತೇಗ, ಹೊನ್ನೆ ಮತ್ತಿ ಇನ್ನೂ ಅನೇಕ ಬೆಲೆ ಬಾಳತಕ್ಕ ಮರಗಳು ಇವೆಯೇ? ಎರಡನೆಯದಾಗಿ ಆ ಅರಣ್ಯದಲ್ಲಿ ವನ್ಯ ಮೃಗಗಳು ಅಂದರೆ ಜಿಂಕೆ, ಸಿಂಹ, ಚಿರತೆ ಮುಂತಾದ ಪ್ರಾಣಿಗಳು ಇವೆಯೇ ಎಂದು ಪ್ರಶ್ನೆಯನ್ನು ಕೇಳುತ್ತಿದ್ದೇನೆ.